2. ಮಂತ್ರಿಗಳ ಹೇಳಿಕೆ

ಶ್ರೀ ಡಿ.ಬಿ.ಚಂದ್ರೇಗೌಡ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ನಿನ್ನೆ ವಿರೋಧ ಪಕ್ಷದ ನಾಯಕರು ಪ್ರಸ್ತಾಪಿಸಿದ ವಿಚಾರದಲ್ಲಿ ನಾನು ಮತ್ತು ತಾವು ಮುಖ್ಯ ನ್ಯಾಯಾಧೀಶರನ್ನು ಸಂಪರ್ಕ ಮಾಡಿದ ವಿಚಾರವನ್ನು ನಾನು ತಿಳಿಸಿದ್ದೆ. ಆದರೆ, ಎಕ್‌ಪ್ರೆಸ್ ನ್ಯೂಸ್ ಸರ್ವಿಸ್‌ನಲ್ಲೊಂದು ಸುದ್ದಿ ಬಂದಿದೆ, "The Chief Justice regretted the mistake and has assured to resolve the problem before August 4." ಎಂದು. ಆದರೆ I have never used the term 'regret'. ಮುಖ್ಯ ನ್ಯಾಯಾಧೀಶರು ರಿಗ್ರೆಟ್ ಎಂದು ಹೇಳಿರುವಂಥ ಪದವನ್ನು ನಾನು ಪ್ರಸ್ತಾಪ ಮಾಡಿಲ್ಲ. ಸದನವು ಕಲಾಪದ ವರದಿ ತರಿಸಿ ನೋಡಿ, ಅದರಲ್ಲಿಯೂ ಇಲ್ಲ. ಈಗ ಬಂದಿರುವ ವರದಿ ಸರಿಯಾದುದಲ್ಲ. ಅದನ್ನು ಸಂಬಂಧಪಟ್ಟ ಪತ್ರಿಕೆಯವರು ತಿದ್ದಿಕೊಳ್ಳಬೇಕು. ಇದರಿಂದ ಅಪಾರ್ಥವಾಗುತ್ತದೆ. ಕೋರ್ಟುಗಳಿಗೂ, ಶಾಸನಸಭೆಗೂ ಸಂಘರ್ಷ ಪ್ರಾರಂಭವಾಗುತ್ತದೆ. ಆ ಪದ ಇಲ್ಲ. ಕಡತದಲ್ಲಿದ್ದರೆ, ಅದನ್ನು ತೆಗೆಸಬೇಕು.

ಅಧ್ಯಕ್ಷರು: ತೆಗೆಸೋಣ.